ಕರ್ನಾಟಕ ವಿಧಾನಸಭೆ

ಶುಕ್ರವಾರ ದಿನಾಂಕ 9ನೇ ಫೆಬ್ರವರಿ 2007ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆ 17 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

ವಿಷಯ: ಕಾವೇರಿ ನ್ಯಾಯ ಮಂಡಳಿಯ ಅಂತಿಮ ತೀರ್ಪು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ನಿನ್ನೆಯ ದಿವಸ ಬಹಿಷ್ಕಾರ ಹಾಕಿ ಈ ಸದನದಿಂದ ಹೊರಗಡೆಗೆ ಹೋಗಿದ್ದೆ. ಕರ್ನಾಟಕ ರಾಜ್ಯಾದ್ಯಂತ ಕನ್ನಡಿಗರಿಗೆ, ಹಾಗೂ ಕರ್ನಾಟಕಕ್ಕೆ ಬೆಂಕಿ ಬಿದ್ದಿದೆ. ಕಾವೇರಿ ಬಗ್ಗೆ ಅವರದ್ದೇನು ತೀರ್ಮಾನ ಎನ್ನತಕ್ಕಂಥದ್ದನ್ನು ಸರ್ಕಾರ ಸ್ಪಷ್ಟಪಡಿಸಿಲ್ಲ. ಏನು ಮಾಡಬೇಕು ಇಲ್ಲಿ? ನಮ್ಮ ನಿರ್ಧಾರವೇನು? ಈ ಸದನದಲ್ಲಿ ನಾವೇನು ಮಾಡಬೇಕಾಗಿದೆ? ಏನು ನಿರ್ಣಯ ಮಾಡಬೇಕು? ಈಗಾಗಲೇ 5ನೇ ತಾರೀಖು ತೀರ್ಪು ಬಂತು. ಇಲ್ಲಿಯವರೆಗೂ ಸರ್ಕಾರ ಏನೂ ಬಾಯಿ ಬಿಚ್ಚಿಲ್ಲ. ಸರ್ವಪಕ್ಷಗಳ ಸಭೆ ಎನ್ನುವುದು ಅದು ಒಂದು ಕಡೆ ಆಗಲಿ. ಆದರೆ, ಈ ಸದನದಲ್ಲಿ ಏನು ಮಾಡಬೇಕು? ಸದನದಲ್ಲಿ ನಮ್ಮ ಜವಾಬ್ದಾರಿ ಏನು? ಸರ್ಕಾರದ ಜವಾಬ್ದಾರಿ ಏನು? ಅದರಿಂದ ಸಾಧಕಬಾಧಕಗಳೇನು? ಅದರಿಂದ ಆಗತಕ್ಕ ಪರಿಸ್ಥಿತಿ ಏನು? ರೈತರಿಗೆ ಏನು ಅನ್ಯಾಯವಾಗಿದೆ? ಇದೆಲ್ಲದರ ಬಗ್ಗೆ ಏನಾದರೂ ಹೇಳಿ ಸಮಗ್ರವಾದ ಒಂದು ನಿರ್ಣಯವನ್ನು ಮಾಡಿ, ಸಂಪೂರ್ಣವಾಗಿ ಅದನ್ನು ತಿರಸ್ಕರಿಸಬೇಕೇ ಅಥವಾ ಏನು ಮಾಡಬೇಕೆನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಸ್ಪಷ್ಟಪಡಿಸಬೇಕು. ಇಲ್ಲವೇ ಮಾನ್ಯ ಜಲಸಂಪನ್ಮೂಲ ಸಚಿವರು ಸ್ಪಷ್ಟಪಡಿಸಬೇಕು. ಕಾವೇರಿ ವಿಚಾರದಲ್ಲಿ ಒಂದು ಕಡೆ ಮಂಡ್ಯ ಸೇರಿದಂತೆ, ಇಡೀ ರಾಜ್ಯವೇ ಒಂದು ರೀತಿ ಹೊಗೆ ಎದ್ದು ಬೆಂಕಿ ಆಡುತ್ತಾ ಕುಳಿತಿದೆ. ಈ ಪರಿಸ್ಥಿತಿಯಲ್ಲಿ ನಾವು ಏನೂ ಮಾಡದೇ, ಇಲ್ಲಿ ಬೇರೆ ವಿಷಯಗಳ ಬಗ್ಗೆ ಚರ್ಚೆ ನಡೆಯುತ್ತಿದ್ದರೆ ನಾನೇನೂ ವಿರೋಧ ಮಾಡುವುದಕ್ಕೆ

ಹೋಗುವುದಿಲ್ಲ. ಆದರೆ, ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ, ನಮಗೆ ಎಷ್ಟು ಅನ್ಯಾಯ ನಡೆದಿದೆ? ರೈತರ ಪರಿಸ್ಥಿತಿ ಏನು? 5ನೇ ತಾರೀಖು ತೀರ್ಮ ಅಯಿತು. ಇವತ್ತು ಆಗಲೇ 9ನೇ ತಾರೀಖು, ಆದರೂ ಈ ಸದನದಲ್ಲಿ ನಾವು ಏನು ಮಾಡಬೇಕು? ಇದರ ಬಗ್ಗೆ ಏನು ಪರಿಸ್ಥಿತಿ? ಯಾವ ತರಹ ಮಾಡೋಣ? ಅಥವಾ ನಿರ್ಣಯವನ್ನು ತಿರಸ್ಕರಿಸುತ್ತೇವೆ, ಈ ಬಗ್ಗೆ ಏನೂ ನಿರ್ಧಾರ ತೆಗೆದುಕೊಂಡಿಲ್ಲ. ಅಂತನಾದರೂ ಹೇಳಿ. ಒಂದು ಕಡೆ ನಮ್ಮ ಸರ್ಕಾರ ಹೀಗಿದೆ, ಮತ್ತೊಂದು ಕಡೆ ನಮ್ಮ ಲೋಕಸಭಾ ಸದಸ್ಯರು ಏನೂ ಮಾತನಾಡುತ್ತಿಲ್ಲ. ಕೇಂದ್ರದ ಮಂತ್ರಿಗಳು ಏನೂ ಮಾತನಾಡುತ್ತಿಲ್ಲ. ಅದರಲ್ಲೂ ನಮ್ಮ ರಾಜ್ಯದಿಂದ ನಾವು 4 ಜನರನ್ನು ರಾಜ್ಯಸಭೆಗೆ ಆಯ್ಕೆ ಮಾಡಿದ್ದೇವೆ. ಒಬ್ಬರು ವೆಂಕಯ್ಯ ನಾಯ್ಡು, ಅವರಿಗೂ ಈ ರಾಜ್ಯಕ್ಕೂ ಸಂಬಂಧವೇ ಇಲ್ಲ. ಅವರು ಏನೂ ಮಾತನಾಡುತ್ತಿಲ್ಲ. ಇನ್ನೊಬ್ಬರು ಮಲ್ಯ, ಅವರ ಬಗ್ಗೆ ಹೇಳುವುದಾದರೆ, ಅವರು ಸಹ ಕಾವೇರಿ ತೀರ್ಪಿನ ಬಗ್ಗೆ ಏನೂ ಮಾತನಾಡುತ್ತಿಲ್ಲ. ಈ ರಾಜ್ಯದಲ್ಲಿ ಬೆಂಕಿ ಬಿದ್ದಿದ್ದರು ಸಹ ಅವರು ನಿನ್ನೆ ವಿಮಾನ ಹಾರಾಟದಲ್ಲಿ ಭಾರಿ ಜೋರಾಗಿ ವೈಭವವಾಗಿ ಕುಳಿತಿದ್ದರು. ಮತ್ತೊಬ್ಬರು ರಾಮಸ್ವಾಮಿ ಎನ್ನುವವರು ತಮಿಳುನಾಡಿನವರಾಗಿದ್ದು ಅವರನ್ನು ನಾವು ಇಲ್ಲಿಂದ ಗೆಲ್ಲಿಸಿ ಕಳುಹಿಸಿದ್ದೇವೆ. ಅವರು ಕೂಡ ಏನು ಎನ್ನತಕ್ಕಂಥದ್ದನ್ನು ಹೇಳುತ್ತಿಲ್ಲ. ರಾಜ್ಯಸಭಾ ಸದಸ್ಯರಾದ ರಾಜೀವ್ ಚಂದ್ರಶೇಖರ್‌ರವರು ಎಲ್ಲಿ ಹೋದರು? ನಿಜಕ್ಕೂ ಇವು ಅತ್ಯಂತ ಕೆಟ್ಟ ದಿನಗಳು. ನಾವು ಅವರನ್ನು ರಾಜ್ಯ ಸಭೆಗೆ ಆಯ್ಕೆ ಮಾಡಿದ್ದೇವೆ. ಯಾವ ಉದ್ದೇಶಕ್ಕೆ ಆಯ್ಕೆ ಮಾಡಿದ್ದೇವೆ ಏಕೆ ಆಯ್ಕೆ ಮಾಡಿದ್ದೇವೆ ಎಂದು ಗೊತ್ತಿಲ್ಲ. ಈ ಕ್ಷಣದವರೆಗೂ ಅವರು ಒಂದು ಅಕ್ಷರವನ್ನೂ ಮಾತನಾಡಿಲ್ಲ. ಜಲ ಸಂಪನ್ಮೂಲ ಸಚಿವರ ಬಗ್ಗೆ ನನಗೆ ಬಹಳ ಗೌರವ ಇಟ್ಟುಕೊಂಡು ಹೇಳುತ್ತಿದ್ದೇನೆ, ದಯವಿಟ್ಟು, ಈ ಸದನದಲ್ಲಿ ನೀವು ಈ ವಿಚಾರದಲ್ಲಿ ಏನು ಎನ್ನತಕ್ಕಂಥದ್ದನ್ನು ಹೇಳದೇ ಬರಗಾಲದ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ, ಪ್ರಶ್ನೋತ್ತರ ಕಾಲ ನಡೆಯುತ್ತಿದೆ, ಆದರೆ ಹೊರಗಡೆ ಇಡೀ ರಾಜ್ಯದಲ್ಲಿ ಬೆಂಕಿ ಬಿದ್ದಿದೆ, ಸಂಪೂರ್ಣ ರಾಜ್ಯದಲ್ಲಿ ಬೇರೆ ಸ್ಥಿತಿ ನಿರ್ಮಾಣವಾಗಿರುವಾಗ ಸರ್ಕಾರದ ನಿಲುವೇನು ಎಂಬುದನ್ನು ನೀವು ಸ್ಪಷ್ಟಪಡಿಸಬೇಕು. ಸರ್ಕಾರದ ನಿಲುವನ್ನು ಸ್ಪಷ್ಟಪಡಿಸದಿರುವುದು ಸರಿಯಲ್ಲ. 1. ವೆಂಕಯ್ಯನಾಯ್ಡು 2. ಮಲ್ಯ 3. ರಾಮಸ್ವಾಮಿ 4. ರಾಜೀವ್ ಚಂದ್ರಶೇಖರ್

ಇವರು ರಾಜೀನಾಮೆ ಕೊಡಬೇಕು. ಇವರು ಕರ್ನಾಟಕದ ದ್ರೋಹಿಗಳು. ಕನ್ನಡದ ದ್ರೋಹಿಗಳು. ಕರ್ನಾಟಕಕ್ಕೆ ಮಾಡಿರತಕ್ಕಂಥ ಅತ್ಯಂತ ಅಪರಾಧ. ಇವರನ್ನು ನಾಳೆ ಹರಾಜು ಹಾಕುತ್ತೇವೆ. ಇವರನ್ನು ನಾಳೆ ರಸ್ತೆ ರಸ್ತೆಯಲ್ಲಿ ಹರಾಜು ಹಾಕುತ್ತಿದ್ದೇವೆ. ಆ ವಿಚಾರ ಬೇರೆ. ನಾವು ಹೊರಗಡೆ ಹಾಕುತ್ತೇವೆ. 12ನೇ ತಾರೀಖು ಇಡೀ ರಾಜ್ಯದ ಸಮಗ್ರ ಬಂದ್‌ಗೆ ಕರೆ ಕೊಟ್ಟಿದ್ದೇವೆ. ಇದು ಪಕ್ಷಾತೀತವಾದ ಬಂದ್. ತಮ್ಮ ಮೂಲಕ ನಾನು ಇಡೀ ಸದನದ ಎಲ್ಲಾ ಸದಸ್ಯರಿಗೂ ಕಳಕಳಿಯ ಮನವಿ ಮಾಡುತ್ತೇನೆ, ಸದಸ್ಯರೆಲ್ಲರೂ ಬಂದ್‌ನಲ್ಲಿ ಭಾಗವಹಿಸಿ. ಆವತ್ತು ಸದನ ನಡೆಸುವುದು, ಬಿಡುವುದು ತಮಗೆ ಸೇರಿದ್ದು. ಸದಸ್ಯರೆಲ್ಲರೂ ಬಂದ್‌ನಲ್ಲಿ ಭಾಗವಹಿಸಿ ಎನ್ನತಕ್ಕಂಥ ಮಾತನ್ನು ಕಳಕಳಿಯಿಂದ ಹೇಳುತ್ತೇನೆ. ಮಾನ್ಯ ಜಲ ಸಂಪನ್ಮೂಲ ಸಚಿವರೇ, ಯಾವಾಗ ಇಲ್ಲಿ ನಿರ್ಣಯ ಮಂಡಿಸುತ್ತೀರಿ? ಏನು ಮಾಡುತ್ತೀರಿ? ನಾನೇನೂ ಇದರ ಬಗ್ಗೆ ವೈಯಕ್ತಿಕವಾಗಿ ಮಾತನಾಡುತ್ತಿಲ್ಲ. 9 ದಿನಗಳಿಂದ ಸದನ ನಡೆಯುತ್ತಿದೆ. ನಾವೇನೂ ಹೇಳುವುದಿಲ್ಲ. ಅಲ್ಲಿ ಕರುಣಾನಿಧಿಯವರು ಒಂದು ಕಡೆ, ನಮಗೆ ಅನ್ಯಾಯವಾಗಿದೆ, ನ್ಯಾಯಾಲಯಕ್ಕೆ ಹೋಗುತ್ತೇವೆ ಎಂದು ಹೇಳುತ್ತಾರೆ. ಮತ್ತೆ, ಮಾಜಿ ಮುಖ್ಯಮಂತ್ರಿಯಾದ ಜಯಲಲಿತಾರವರು ನ್ಯಾಯಾಲಯಕ್ಕೆ ಹೋಗುತ್ತೇವೆಂದು ಹೇಳುತ್ತಾರೆ. ಆದರೆ ನಮ್ಮಲ್ಲಿ ಶಬ್ದವೇ ಇಲ್ಲ. ಮುಖ್ಯಮಂತ್ರಿಗಳ ಶಬ್ದವಿಲ್ಲ. ಉಪ ಮುಖ್ಯಮಂತ್ರಿಗಳ ಶಬ್ದವಿಲ್ಲ. ಜಲ ಸಂಪನ್ಮೂಲ ಸಚಿವರ ಶಬ್ದವಿಲ್ಲ. ಏನಿದು ಪರಿಸ್ಥಿತಿ? ಈ ರಾಜ್ಯಕ್ಕೆ ಹೇಳುವವರು, ಕೇಳುವವರು, ದಿಕ್ಕು, ದೆಸೆ ಏನಿಲ್ಲವೇ? ಕನ್ನಡಿಗರ ಪರಿಸ್ಥಿತಿ ಏಕೆ ಈ ರೀತಿಯಾಗಿದೆ. ಮಂಡ್ಯ ಉದ್ದಕ್ಕೂ ಚಳವಳಿ ನಿರಂತರವಾಗಿ ನಡೆಯುತ್ತಿದೆ. ಮಂಡ್ಯ, ಮೈಸೂರು, ಚಾಮರಾಜನಗರ, ಬೆಂಗಳೂರು ಜಿಲ್ಲೆಗಳಲ್ಲಿ ಹಗಲು–ರಾತ್ರಿ ಹತ್ತಿ ಉರಿಯುತ್ತಿದೆ. ತಾವೂ ಆ ಭಾಗದಿಂದ ಬಂದಿರುವವರು. ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ, ಈ ಬಗ್ಗೆ ಈ ಸದನದ, ಸರ್ಕಾರದ ನಿರ್ಧಾರವೇನು? ಏನು ಮಾಡುತ್ತೀರಿ ಎನ್ನತಕ್ಕಂಥ ನಿರ್ಣಯ ಇಲ್ಲಾಗಬೇಕು. ತೀರ್ಪನ್ನು ಸಾರಾಸಗಟಾಗಿ ತಿರಸ್ಕರಿಸಬೇಕು. ನಿಮಗೆ ಅದು ಒಪ್ಪಿಗೆಯಾಗಿದೆಯೇ? ಅದನ್ನು ಹೇಳಿ. ನಮಗೆ ಈ ತೀರ್ಪು ಒಪ್ಪಿಗೆಯಾಗಿದೆ ಎಂದು ಅದನ್ನಾದರೂ ಹೇಳಿ. ಇಲ್ಲ, ತಿರಸ್ಕರಿಸಿ. ಏನಾದರೂ ಹೇಳಿ.

* ಈ ಪದಗಳನ್ನು ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿರುತ್ತದೆ

ಅಧ್ಯಕ್ಷರು: ಈಗ ಸರ್ಕಾರದ ಕಡೆಯಿಂದ . . . .

ಶ್ರೀ ಎಸ್.ಎಸ್. ಪಾಟೀಲ್: ನಿಜವಾಗಿ, ವಾಟಾಳ್ ಒಬ್ಬರೇ ಮಾತನಾಡುತ್ತಾರೆ. ಪಾಪ, ಅವರು ನಿನ್ನೆಯಿಂದ ಹೇಳುತ್ತಿದ್ದಾರೆ. ಅದಕ್ಕೆ ನಮ್ಮೆಲ್ಲರದು support ಇದೆ. ಕೆಲವು ವಿಚಾರದಲ್ಲಿ ಅವರು ರಾಜೀನಾಮೆ ಕೊಡುವುದು, ಅದು ಬೇರೆ ವಿಚಾರ. ಆದರೆ, ಈ ವಿಚಾರವಾಗಿ assembly ಮುಗಿಯುವುದರೊಳಗಾಗಿ assembly ಯಲ್ಲಿ ಏನಾದರೊಂದು ನಿರ್ಣಯ ತೆಗೆದುಕೊಳ್ಳಬೇಕು. ಇದು ರಾಜ್ಯಕ್ಕೆ ಸಂಬಂಧಪಟ್ಟಂಥ ವಿಚಾರ. ರಾಜ್ಯಕ್ಕಾದಂಥ ಅನ್ಯಾಯ. ಇದಕ್ಕೆ ನಿಜವಾಗಿಯೂ ಮೊದಲನೇ ಆದ್ಯತೆ ಕೊಟ್ಟು ಏನಾದರೂ ಮಾಡಿ assembly ಯಲ್ಲಿ ನಿರ್ಣಯವಾಗಲಿ. Assembly ಯಲ್ಲಿ ಸರ್ಕಾರ ನಿರ್ಣಯ ಮಂಡಿಸಲಿ. ಸರ್ವಾನುಮತದಿಂದ ನಿರ್ಣಯ ಮಾಡೋಣ. ಈಗ ಹೇಗೆ ನಮ್ಮ ಮಹಾಜನ್ ವರದಿಯ ಬಗ್ಗೆ ನಾವಿಲ್ಲಿ ಒಂದು ನಿರ್ಣಯ ತೆಗೆದುಕೊಂಡೆವು. ಅದೇ ರೀತಿಯಾಗಿ, ಇದರ ಬಗ್ಗೆ ಕೂಡ assembly ಯಲ್ಲಿ ನಿರ್ಣಯವಾಗಬೇಕು. ಆ ಕಾರಣದಿಂದ ಅಧ್ಯಕ್ಷರೆ, ನೀವು ಸರ್ಕಾರಕ್ಕೆ ಹೇಳಬೇಕು. ಅವರೇ ನಿರ್ಣಯ ಮಂಡಿಸಲಿ. ಇಲ್ಲದಿದ್ದರೆ, ನಮಗೆ ಬಿಟ್ಟರೆ ನಾವಾದರೂ ಮಂಡಿಸುತ್ತೇವೆ. ಸರ್ಕಾರ ಮಂಡಿಸುವುದು ಯೋಗ್ಯವಿದೆ. ಆ ಕಾರಣದಿಂದ, ತೀವ್ರವಾಗಿ ನಿರ್ಣಯ ಮಂಡಿಸಿ. ಇದರ ಬಗ್ಗೆ ಏನಾದರೊಂದು ನಿರ್ಣಯ ತೆಗೆದುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್: ನಿರ್ಣಯ ಮಂಡಿಸಿ. ಮಂಡಿಸುವುದಕ್ಕೆ ಅವಕಾಶವಿದೆ. ಆ ಬಗ್ಗೆ ನಾನು ನಮ್ಮ ಸ್ನೇಹಿತರ ಜೊತೆ ಮಾತನಾಡುತ್ತೇನೆ. ನಾಳೆ ಸೋಮವಾರ ನಂತರ ನಾವು, ನಮ್ಮ ಸ್ನೇಹಿತರೆಲ್ಲರೂ ಸೇರಿ ಖಾಸಗಿ ನಿರ್ಣಯ ಮಂಡಿಸಬೇಕು ಎಂಬ ನಿರ್ಧಾರ ಮಾಡಿದ್ದೇವೆ. ಅದರ ಬಗ್ಗೆ ನಾವು ತೀರ್ಮಾನ ತೆಗೆದುಕೊಳ್ಳುತ್ತೇವೆ. ಆದ್ದರಿಂದ, ನಾನು ತಮಗೆ ಹೇಳುತ್ತಿದ್ದೇನೆ. ನಮ್ಮ ಅಧಿಕಾರಿಗಳು ಎಷ್ಟು ಬೇಜವಾಬ್ದಾರಿಯಿಂದ ಇದ್ದಾರೆಂದರೆ, ಒಬ್ಬರು ವಾರ್ತಾಧಿಕಾರಿಯವರಿಗೇಕೆ ಬೇಕು ಕಾವೇರಿ ವಿಷಯದ ಬಗ್ಗೆ ಮಾತನಾಡುವುದು? ಕಾವೇರಿ ಬಗ್ಗೆ ಅವರಿಗೇನು ಬೇಕು? ಪತ್ರಿಕೆಗಳಲ್ಲಿ ಏಕೆ ಇಷ್ಟು ಪ್ರಚಾರ ಕೊಡುತ್ತಿದ್ದೀರಿ? ಏನು ವಿಚಾರ? ಬಾಯಿಗೆ ಬಂದ ಹಾಗೆ ಕಾವೇರಿ ವಿರುದ್ಧ ಒಬ್ಬ ಅಧಿಕಾರಿ ಮಾತನಾಡುತ್ತಾರೆ. ಆ ವಾರ್ತಾಧಿಕಾರಿಯನ್ನು ವಜಾ ಮಾಡಬೇಕು. ಅವರನ್ನು ಏಕೆ ಇಟ್ಟುಕೊಳ್ಳಬೇಕು? ನಮ್ಮ ದೆಹಲಿಯಲ್ಲಿ

ಕರ್ನಾಟಕ ಭವನದಲ್ಲಿ ಕಾವೇರಿ ಬಗ್ಗೆ ಸಭೆ ನಡೆಯಕೂಡದು, ಸಭೆ ಮಾಡಬಾರದೆಂದು ಅಲ್ಲೊಬ್ಬ ಅಧಿಕಾರಿ ಹೇಳುತ್ತಾನೆ. ಕರ್ನಾಟಕ ಭವನದಲ್ಲಿ ಇಂಥ ರಾಜಕೀಯ ಸಭೆಗಳು ನಡೆಯಬಾರದು ಎಂದು ಹೇಳುತ್ತಾನೆ ಇದು ಎಲ್ಲಿಯಾದರೂ ಉಂಟೆ? ನಮ್ಮದು ಏನು ಕಥೆ? ತಮಿಳುನಾಡಿನವರು ಇವತ್ತು ಕೇಕೆ ಹಾಕುತ್ತಿದ್ದಾರೆ. ತಮಿಳು ಪತ್ರಿಕೆಗಳಲ್ಲಿ, ಕರ್ನಾಟಕದವರಿಗೆ ದಮ್ಮಿಲ್ಲ, ಕನ್ನಡಿಗರಿಗೆ ಶಕ್ತಿ ಇಲ್ಲ ಎಂದು ಬರೆಯುತ್ತಿದ್ದಾರೆ. ನಮ್ಮ ಪರಿಸ್ಥಿತಿ ಏನು? ಇದು ಎಲ್ಲಿಗೆ ಹೋಗುತ್ತಿದೆ ಈಶ್ವರಪ್ಪನವರೆ? ದಯವಿಟ್ಟು, ನೀವು ಹೇಳಬೇಕು ಅಥವಾ ಸಚಿವ ಸಂಪುಟ ಸಭೆ ಸೇರಿಲ್ಲ. ತೀರ್ಮಾನ ತೆಗೆದುಕೊಳ್ಳಲಿಲ್ಲ. ಮೊನ್ನೆ ಸರ್ವ ಪಕ್ಷ ಸಭೆ ಮುಂದಕ್ಕೆ ಹೋದದ್ದು ಏಕೆ? ತೀರ್ಪಿನ ಸಂಪೂರ್ಣ ವರದಿ ಸಿಕ್ಕಲಿಲ್ಲವೆಂದು ಮುಂದೆ ಹೋಯಿತು. ವರದಿ ಸಿಕ್ಕುವುದಕ್ಕೆ ಎಷ್ಟು ದಿವಸ ಬೇಕು ಸ್ವಾಮಿ? ಒಂದು ಸರ್ಕಾರ, ಎಂದರೆ ಸಂಪೂರ್ಣವಾಗಿ ಒಂದು machinery, ಇರತಕ್ಕಂಥದ್ದು. ಈ ಸರ್ಕಾರಕ್ಕೆ 5ನೇ ತಾರೀಖು ಬೆಳಗ್ಗೆ 11 ಪುಟಗಳು ಬಂದಿವೆ, ಸಂಜೆಯವರೆಗೂ ಇವರಿಗೇನೂ ಸಿಕ್ಕಲಿಲ್ಲ. 6ನೇ ತಾರೀಖು ಸಿಕ್ಕಲಿಲ್ಲ. 7ನೇ ತಾರೀಖು ಸಿಕ್ಕಲಿಲ್ಲ. 8ನೇ ತಾರೀಖು ಸಿಕ್ಕಲಿಲ್ಲ ಎಂದರೆ ಇದು ಏನು ಸರ್ಕಾರ? ಏನು ಗತಿ? ಇದು ಎಲ್ಲಿಗೆ ಹೋಗಿದೆ? ಸರ್ಕಾರ ಈ ರಾಜ್ಯದಲ್ಲಿ ಇದೆಯೇ? ಎಂದು ನೇರವಾದ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ. ಏಕೆ ಸ್ವಾಮಿ, ನಿಮಗೆ ಸಂಪೂರ್ಣ ವರದಿ ಸಿಗಲಿಲ್ಲ? ಆವತ್ತು ನೀವು ಸರ್ವ ಪಕ್ಷಗಳ ಸದಸ್ಯರಿಗೇಕೆ ಒದಗಿಸಲಿಲ್ಲ? ಕಾರಣವೇನು? ಹಗಲು-ರಾತ್ರಿ ಹೋರಾಟ ಮಾಡಿ, ಅದನ್ನು ತಂದು ಕೊಡುವುದಕ್ಕೆ ನಿಮಗೇನು ತೊಂದರೆ? ಕೇಂದ್ರದಲ್ಲಿ, ಡೆಲ್ಲಿಯಲ್ಲಿ ಕರ್ನಾಟಕಕ್ಕೆ ವ್ಯವಸ್ಥೆ ಇಲ್ಲವೇ? ಕರ್ನಾಟಕದಲ್ಲಿ ನಿಮ್ಮ ಅಧಿಕಾರಿಗಳಿಲ್ಲವೇ? ನ್ಯಾಯಾಧಿಕರಣದಲ್ಲಿ ವಾದ ಮಾಡಿರತಕ್ಕಂಥ ನಮ್ಮ ವಕೀಲರಿಲ್ಲವೇ? 104 ಕೋಟಿ ರೂಪಾಯಿಗಳ ಸಂಭಾವನೆಯನ್ನು ನಾವು ವಕೀಲರಿಗೆ ಕೊಟ್ಟಿದ್ದೇವೆ. ಇವತ್ತೇನಾಯಿತು? ಕರ್ನಾಟಕ ಸರ್ಕಾರಕ್ಕೆ 9ನೇ ತಾರೀಖಾದರೂ ಸಂಪೂರ್ಣ ವರದಿ ಬಂದಿಲ್ಲವೆಂದರೆ ಇದೇನಾಗಬೇಕು? ಆದ್ದರಿಂದ, ಜಲ ಸಂಪನ್ಮೂಲ ಸಚಿವರೆ, ನಾನು ನಿಮಗೆ ಹೇಳುತ್ತೇನೆ, ನೀವು ದಿಟ್ಟ ನಿಲುವನ್ನು ಪ್ರದರ್ಶನ ಮಾಡಿದರೆ, ಕರ್ನಾಟಕ ಇತಿಹಾಸದಲ್ಲಿ ಉಳಿಯುತ್ತೀರಿ. ನಾನು ಮತ್ತೆ ಮತ್ತೆ ಹೇಳುತ್ತೇನೆ. ಬಂಗಾರಪ್ಪನವರ ಬಗ್ಗೆ ನಾನು ಮತ್ತೆ ಮತ್ತೆ ಹೇಳುತ್ತೇನೆ. ಅವರು ಸುಗ್ರೀವಾಜ್ಞೆ ತಂದರು. ನಮ್ಮ ನೀರು, ನಮ್ಮ ಜಲಾಶಯ ಬೇರೆ ರಾಜ್ಯಕ್ಕೆ

ಕೊಡುವುದಿಲ್ಲ ಎನ್ನುವ ಸುಗ್ರೀವಾಜ್ಞೆಯನ್ನು ಈ ಸದನದಲ್ಲಿ ತಂದಂಥ ಇತಿಹಾಸ ಇದೆ. ಬಂಗಾರಪ್ಪನವರನ್ನು ಇವತ್ತಿನ ದಿನ ನಾನು ಗಂಡು ಎಂದು ಕರೆಯುತ್ತಿದ್ದೇನೆ. ಒಂದು ಹನಿ ನೀರು ಕೊಡುವುದಿಲ್ಲ. ಜಲಾಶಯಗಳು ಸಂಪೂರ್ಣ ಉಪಯೋಗವಾಗಬೇಕು. ಕಬಿನಿ 2ನೇ ಹಂತ ಆಗಬೇಕು. ನಮ್ಮ ಎಲ್ಲಾ ಜಲಾಶಯಗಳ ನೀರನ್ನು ನಾವು ಉಪಯೋಗಿಸಿಕೊಳ್ಳಬೇಕು. ನಾವು ಉಪಯೋಗಿಸಿದ ಮೇಲೆ ಬೇರೆಯವರಿಗೆ ಕೊಡುವುದು. ನಾವು ಮೇಲಿರುವಂಥದ್ದು. ಜಲಾಶಯದ ಮೇಲೆ. ಕೃಷ್ಣರಾಜ ಸಾಗರ, ಕಬಿನಿ, ಹೇಮಾವತಿ, ಹಾರಂಗಿ. ನಾವು ಮೇಲಿದ್ದೇವೆ. ನಮ್ಮ ನೀರು, ಅವರನ್ನು ಕೇಳಿ, ನಮ್ಮ ಮೇಲೆ ದೌರ್ಜನ್ಯ ಮಾಡಿ, ಅದಕ್ಕೊಂದು ಪ್ರಾಧಿಕಾರ ರಚನೆ ಮಾಡಿ, ಅವರು ಹೇಳಿದ ಹಾಗೆ ನಾವು ನೀರು ಬಿಟ್ಟುಕೊಂಡು ಕುಳಿತುಕೊಳ್ಳುವುದಾದರೆ, ಬಾಗಿಲು ತೆಗೆದು ಜಲಾಶಯಗಳಿಂದ ಕೊಟ್ಟುಬಿಡಿ. ಬಿಟ್ಟುಬಿಡಿ ಹೊರಟುಹೋಗಲಿ. ಕಾವೇರಿ ಬೇಡ, ಕಬಿನಿ ಬೇಡ, ಹೇಮಾವತಿ ಬೇಡ, ಹಾರಂಗಿ ಬೇಡ. ಎಲ್ಲ ಬಾಗಿಲು ತೆಗೆದು ತಮಿಳುನಾಡಿನ ಮೆಟ್ಟೂರಿಗೆ, ಬಿಳಿಗುಂಡ್ಲುಗೆ ಬಿಟ್ಟುಬಿಡಿ. ಅವರಿಗೆ ಹೋಗಲಿ. ಯಾರಿಗೋಸ್ಕರ? ನಮ್ಮ ರಾಜ್ಯ. ನಿಜಲಿಂಗಪ್ಪನವರನ್ನು ಇವತ್ತು ನಿನ್ನೆ ದುಕೊಳ್ಳಬೇಕು. ಚನ್ನಬಸಪ್ಪನವರನ್ನು ನಿನ್ನೆ ದುಕೊಳ್ಳಬೇಕು. ಇವತ್ತು ಸಿದ್ದವೀರಪ್ಪನವರನ್ನು ನಿನ್ನೆ ದುಕೊಳ್ಳಬೇಕು. ಇವತ್ತಿನ ನಂಜೇಗೌಡರು ನಿನ್ನೆ ದುಕೊಳ್ಳಬೇಕು. ಆ ಕಾಲದಲ್ಲಿ ಜಲಾಶಯಗಳನ್ನು ಕಟ್ಟಿ ಮಾಡಿದ್ದಾರೆ. ಈಶ್ವರಪ್ಪನವರೆ, ನಾನು ಕೈಮುಗಿದು ಹೇಳುತ್ತಿದ್ದೇನೆ, ಈ ನಾಡಿನ ಸಮಗ್ರ ಕನ್ನಡಿಗರ ಪರವಾಗಿ ದಿಟ್ಟ ನಿಲುವು ತೆಗೆದುಕೊಂಡು ನೀವು ರಾಜೀನಾಮೆ ಕೊಟ್ಟರೂ ಪರವಾಗಿಲ್ಲ, ಹೊರಕ್ಕೆ ಬಂದರೂ ಚಿಂತೆ ಇಲ್ಲ. ದಯಮಾಡಿ, ಈ ಸದನದಲ್ಲಿ ಇವತ್ತು ನೀವು ಅದನ್ನು ತಿರಸ್ಕರಿಸುತ್ತೀರೋ ಅಥವಾ ಸ್ವಾಗತ ಮಾಡುತ್ತೀರೋ? ಏನಾದರೊಂದು ಹೇಳಿ. ಇಲ್ಲ, ಸಂಪೂರ್ಣ ಸಾರಾಸಗಟಾಗಿ ನ್ಯಾಯ ಮಂಡಲಿ ತೀರ್ಪನ್ನ ತಿರಸ್ಕರಿಸಿದ್ದೇವೆ ಎಂದು ಹೇಳಿ. ಮುಂದೆ ನೀವು ನಿಮ್ಮ ಕಾರ್ಯಕ್ರಮಗಳನ್ನು ಏನು ಹಾಕುತ್ತೀರಿ? ಅದನ್ನು ನೀವು ಮಾಡಿಕೊಳ್ಳಿ. ಮೊದಲು ಹೇಳಿ ಸ್ವಾಮಿ ನೀವು. ನೀವು ಮಹಾಜನ್ ವರದಿ ತಿರಸ್ಕರಿಸಲಿಲ್ಲವೇ? ಮಹಾಜನ್ ವರದಿಯನ್ನು ಸಂಪೂರ್ಣವಾಗಿ ಒಪ್ಪಬೇಕೆಂದು ಎಂದು ಹೇಳಿ ಆ ಸಂದರ್ಭದಲ್ಲಿ ಮಹಾರಾಷ್ಟ್ರದವರು ತಿರಸ್ಕರಿಸಿದಾಗ ಅಧ್ಯಕ್ಷರು ಇಲ್ಲಿ 4 ಬಾರಿ ನಿರ್ಣಯ ಮಾಡಿದ್ದೇವೆ. ಮಹಾಜನ್ ವರದಿ ಅಂತಿಮ,

ಬೆಳಗಾಂ ಅನ್ನು ಬಿಟ್ಟುಕೊಡುವುದಕ್ಕೆ ಸಾಧ್ಯವಿಲ್ಲ, ಕಾಸರಗೋಡು ಕರ್ನಾಟಕಕ್ಕೆ ಸೇರಬೇಕೆಂದು ಹೇಳಿ ಇಲ್ಲಿ ನಿನ್ನೆ ಸುವ ಇತಿಹಾಸವಿದೆ. ತಾವು ಇವತ್ತು ಅದನ್ನು ಬಿಟ್ಟು ಬೇರೆ ಪ್ರಶ್ನೋತ್ತರ ಕಾಲವಾಗಲಿ, ಬೇರೆ ಚರ್ಚೆಯಾಗಲಿ ಮಾಡುವುದಾದರೆ, ನಿಜಕ್ಕೂ ಬಹಳ ನೋವಾಗುತ್ತದೆ. ದಯಮಾಡಿ, ಮಾನ್ಯ ಸಚಿವರು ಇದರ ಬಗ್ಗೆ ಏನು ಹೇಳುತ್ತೀರೋ ತಾವು ಉತ್ತರ ಕೊಡಬೇಕು.

ಶ್ರೀ ತನ್ವೀರ್ ಸೇಠ್: ನಿನ್ನೆ ಕಾವೇರಿ ಹೋರಾಟ ಮಾಡುತ್ತಿರುವಂಥ ಕಾರ್ಯಕರ್ತರ ಮೇಲೆ ಲಘುವಾಗಿ ಮಾತನಾಡಿರುವಂಥ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳಬೇಕೆನ್ನುವಂಥದ್ದರ ಬಗ್ಗೆ ವಾಟಾಳ್ ನಾಗರಾಜ್‌ರವರು ಹೇಳಿದ್ದಾರೆ. ಇವತ್ತು ಅಧಿಕಾರಿಗಳ ಮಾತು ಯಾವ ರೀತಿ ಇರಬೇಕು ಎಂದು ಹಿಡಿತದಲ್ಲಿಟ್ಟುಕೊಂಡು ಅವರು ಮಾತನಾಡಬೇಕಾಗುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಏಕೆಂದರೆ, ಬೇರೆ ಕಾರ್ಯಕ್ರಮ ನಡೆದರೆ..

ಅಧ್ಯಕ್ಷರು: ಅಯಿತು. ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ನಾನು ಇವತ್ತೂ ಸದನದಲ್ಲಿರುವುದಿಲ್ಲ. ನಾನು ಬಹಿಷ್ಕಾರ ಹಾಕಿ ಹೊರಗೆ ಹೋಗುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು): ನಮ್ಮ ಹಿರಿಯ ಶಾಸಕರು, ಕನ್ನಡ ಪರ ಹೋರಾಟಗಾರರೂ ಆದ ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡಿದಂಥ ಕಾವೇರಿ ನೀರಿಗೆ ಸಂಬಂಧಿಸಿದಂತೆ ಅಂತಿಮ ತೀರ್ಪು ಏನು ಬಂದಿದೆ, ಇದರ ಬಗ್ಗೆ ತುಂಬಾ ಸ್ಪಷ್ಟವಾಗಿ ಅವರ ಅಭಿಪ್ರಾಯವೇನು ಎಂದು ಹೇಳಿದ್ದಾರೆ. ಅದೇ ಅಭಿಪ್ರಾಯ ನಮ್ಮ ಸರ್ಕಾರದವರ ಅಭಿಪ್ರಾಯ ಆಗಿದೆ. ಅದರಲ್ಲೇನೂ ಹಿಂದೆ ಮುಂದೆ ಮಾಡುವ ಪ್ರಶ್ನೆ ಇಲ್ಲ. ಇವತ್ತು ನಮಗೆ ಅನ್ಯಾಯವಾಗಿದೆ ಎನ್ನುವಂಥ ಅಂಶವನ್ನು ಕೂಡ ನಾವೆಲ್ಲರೂ ಕೂಡ ತುಂಬಾ ಸ್ಪಷ್ಟವಾಗಿ ಈಗಾಗಲೇ ಹೇಳಿದ್ದೇವೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕು ಎನ್ನುವ ಅಂಶದ ಬಗ್ಗೆ ಕೂಡ ಸರ್ವಪಕ್ಷಗಳ ಸಭೆಯನ್ನೂ ಕೂಡ ನಾವು ಈಗಾಗಲೇ ಕರೆದಿದ್ದೇವೆ. ಹಿರಿಯ ಶಾಸಕರಾದ ವಾಟಾಳ್ ನಾಗರಾಜ್‌ರವರು ಕೂಡ ಅದರಲ್ಲಿ ಭಾಗವಹಿಸಿದ್ದರು. ಆ ಸಭೆಯಲ್ಲಿ ಈಗಾಗಲೇ ತೀರ್ಮಾನವಾಗಿರುವ ಪ್ರಕಾರ ಅಂತಿಮ ತೀರ್ಪಿನ ವರದಿ ಆವತ್ತು ಸಭೆ ಕರೆದಿದ್ದ ದಿನ ನಮಗಿನ್ನೂ ಬಂದಿರಲಿಲ್ಲ. 5ನೇ ತಾರೀಖಿನ ದಿವಸ ಈ

ತೀರ್ಮ ಆಗಿದೆ. ನಿನ್ನೆ ನಿವಸ ಅಂತಿಮ ತೀರ್ಪಿನ ವರದಿ ನಮಗೆ ಬಂದಿದೆ. ಆ ತೀರ್ಪಿನ ವರದಿಯನ್ನು 1000 ಕಾಪಿ ಮಾಡಿ ತಕ್ಷಣ ಇವತ್ತೇ ಎಲ್ಲಾ ಪ್ರತಿಪಕ್ಷದವರಿಗೆ ಮತ್ತು ಹೋರಾಟಗಾರರಿಗೆ, ನೀರಾವರಿ ತಜ್ಞರಿಗೆ ಹಾಗೂ ವಕೀಲರಿಗೆ ಮತ್ತು ಇದರ ಬಗ್ಗೆ ಯಾರ್ಯಾರಿಂದ ಸಲಹೆ ಪಡೆದುಕೊಳ್ಳಬೇಕೆಂದು ನಾವು ಅಪೇಕ್ಷೆ ಪಟ್ಟಿದ್ದೇವೆಯೋ ಅವರೆಲ್ಲರಿಗೂ ಮತ್ತು ಎಲ್ಲಾ ಮಾನ್ಯ ಶಾಸಕರಿಗೂ ಕೂಡ ಕೊಡುತ್ತೇವೆ. ಇದರ ಬಗ್ಗೆ ಅವರೆಲ್ಲರ ಸಲಹೆಗಳನ್ನು ನಾವು ಸ್ವೀಕಾರ ಮಾಡಿಕೊಂಡು ಏನು ಮಾಡಬೇಕೆಂಬುದರ ಬಗ್ಗೆ ತೀರ್ಮಾನ ತೆಗೆದುಕೊಳ್ಳೋಣ. ಮಾನ್ಯ ವಾಟಾಳ್ ನಾಗರಾಜ್‌ರವರ ಕಳಕಳಿ ನನಗೆ ಅರ್ಥವಾಗುತ್ತದೆ. ಈ ಸಭೆಯಲ್ಲಿ ನಾನು ಹೊಗಳುವುದಕ್ಕೆ ಹೋಗುವುದಿಲ್ಲ. ನಾನು ಈ ಸಭೆಗೆ ಬಂದಾಗಿನಿಂದ ಮಾನ್ಯ ವಾಟಾಳ್ ನಾಗರಾಜ್‌ರವರನ್ನು ನೋಡುತ್ತಿದ್ದೇನೆ. ಅವರು ಕನ್ನಡದ ಪರವಾಗಿ ನಿಜಕ್ಕೂ ಕೂಡ ರಾಜ್ಯದ ಮತ್ತು ನಮ್ಮಂಥ ಅನೇಕರಿಗೆ ಮಾರ್ಗದರ್ಶನವಾಗುವಂಥ ರೀತಿಯಲ್ಲಿ ಹೋರಾಟ ಮಾಡುತ್ತಿದ್ದಾರೆ. ಅವರ ಕನ್ನಡ ಪರ ಹೋರಾಟದ ಬಗ್ಗೆ ನಾನು ನೋಡುತ್ತಾ ಬಂದಿದ್ದೇನೆ. ಅವರ ಮಾರ್ಗದರ್ಶನವನ್ನು ಸ್ವೀಕಾರ ಮಾಡುವುದಕ್ಕೆ ನಾನು ವೈಯಕ್ತಿವಾಗಿ ತಯಾರಿದ್ದೇನೆ. ಸರ್ಕಾರ ಕೂಡ ಆ ದಿಕ್ಕಿನಲ್ಲಿ ಮುಂದುವರಿಯುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆದ್ದರಿಂದ ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ನಿನ್ನೆ ದಿವಸ ಅಂತಿಮ ತೀರ್ಪಿನ ವರದಿ ಬಂದಿದೆ. ತೀರ್ಪಿನ ವರದಿಯ 1000 ಕಾಪಿ ಮಾಡುವುದಕ್ಕೆ ನಿನ್ನೆ ದಿವಸ ಆದೇಶ ಕೊಟ್ಟಿದ್ದೇವೆ. ನಾನು ಈಗಾಗಲೇ ಹೇಳಿದ ಹಾಗೆ ಎಲ್ಲರಿಗೂ ಅದರ ಕಾಪಿಯನ್ನು ಕೊಟ್ಟು ಎಲ್ಲರ ಸಲಹೆಗಳನ್ನು ತೆಗೆದುಕೊಳ್ಳಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. ಇವತ್ತು ಸಂಜೆ 5.00 ಗಂಟೆಗೆ ಸಚಿವ ಸಂಪುಟದ ಸಭೆ ಇದೆ. ಸರ್ವಪಕ್ಷದ ಸಭೆಯನ್ನು ನಾವು ಯಾವತ್ತು ಕರೆಯಬೇಕೆಂದು ಮತ್ತು ಮುಂದೆ ಇದರ ಬಗ್ಗೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಇವತ್ತಿನ ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ. ಏಕೆಂದರೆ, ನಿಮ್ಮೆಲ್ಲರ ಮಾರ್ಗದರ್ಶನದ ಪ್ರಕಾರ ಈ ಸರ್ಕಾರ ಕಾನೂನಿನ ವಿಚಾರದಲ್ಲಿ ಯಾವುದೇ ಕಾರಣಕ್ಕೂ ಒಂದು ಹೆಜ್ಜೆ ಹಿಂದಿಡುವುದಕ್ಕೆ ತಯಾರಿಲ್ಲ. ಈ ಒಂದು ವಿಚಾರದಲ್ಲಿ ಕರ್ನಾಟಕ ರಾಜ್ಯದ ಹಿತವನ್ನು ಕಾಪಾಡಲು ಎಲ್ಲಾ ದಿಕ್ಕಿನಲ್ಲಿ ನಾವು ಪ್ರಯತ್ನ ಮಾಡಿ ಅದರಲ್ಲಿ ಯಶಸ್ವಿಯಾಗುವ ದಿಕ್ಕಿನಲ್ಲಿ

ಮುಂದುವರಿಯುತ್ತೇವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ಕಡೆ ಕಾನೂನು ಸಮರ ಅಂದರೆ, ಅದರ ಬಗ್ಗೆ ರಿವ್ಯೂ ಪೆಟಿಷನ್ ಹಾಕಿಕೊಳ್ಳಬೇಕೇ ಅಥವಾ ಸುಪ್ರೀಂ ಕೋರ್ಟ್‌ಗೆ ಹೋಗಬೇಕೇ ಅಥವಾ ಸರ್ವಪಕ್ಷಗಳ ನಿಯೋಗವನ್ನು ದೆಹಲಿಗೆ ಕರೆದುಕೊಂಡು ಹೋಗಬೇಕೆಂಬುದರ ಬಗ್ಗೆ ಎಲ್ಲರೂ ಏನು ಸಲಹೆ ಕೊಡುತ್ತಾರೆಯೋ ಆ ಸಲಹೆಗಳನ್ನು ತೆಗೆದುಕೊಂಡು ಸರ್ಕಾರ ಮುಂದಿನ ಹೆಜ್ಜೆಯನ್ನು ಇಡುತ್ತೇವೆ. ಹಿಂದೆ 450 ಕೋಟಿ ರೂಪಾಯಿಗಳನ್ನು ಕಾವೇರಿ ನಿಗಮಕ್ಕೆ ನೀಡಲಾಗಿತ್ತು. ಕಳೆದ ಬಾರಿ ನಾವು 650 ಕೋಟಿ ರೂಪಾಯಿಗಳನ್ನಿಟ್ಟಿದ್ದೆವು. 650 ಕೋಟಿ ರೂಪಾಯಿ ಕೊಟ್ಟು ಅನೇಕ ವರ್ಷಗಳಿಂದ ನಿನ್ನೆ ಗುದಿಗೆ ಬಿದ್ದಿಂಥ ಅನೇಕ ಯೋಜನೆಗಳನ್ನು ಮುಗಿಸಬೇಕೆಂದು ತೀರ್ಮಾನ ಮಾಡಿದ್ದು, ಮಾರ್ಚ್ ತಿಂಗಳೊಳಗಾಗಿ ಈ ಎಲ್ಲಾ ಕೆಲಸಗಳನ್ನು ಮುಗಿಸುತ್ತೇವೆ. ಈ ಒಂದು ಬಜೆಟ್‌ನಲ್ಲಿ ಇನ್ನೂ 9 ಯೋಜನೆಗಳನ್ನು ತೆಗೆದುಕೊಂಡು ಮುಗಿಸುತ್ತೇವೆ. ಜೊತೆಗೆ ಯಾವ್ಯಾವ ಕಾಲುವೆಗಳು ಸೋರುತ್ತಿವೆಯೋ ಅವುಗಳನ್ನು ಸಹ ದುರಸ್ತಿ ಮಾಡಲಾಗುತ್ತದೆ. ಭದ್ರ ನಾಲೆಯಿಂದ ಸುಮಾರು 6 TMC ನೀರು ಸೋರಿ ಹೋಗುತ್ತಿತ್ತು. ಇದಕ್ಕೆ 471 ರೂಪಾಯಿ ಖರ್ಚು ಮಾಡಿ ಭದ್ರ ನಾಲೆಯ ಆಧುನೀಕರಣ ಮಾಡಿ ಅಷ್ಟು ನೀರು ಸೋರುತ್ತಿರುವುದನ್ನು ನಿಲ್ಲಿಸಿ ಆ ನೀರನ್ನು ರೈತರಿಗೆ ಕೊಡತಕ್ಕಂಥ ಕೆಲಸ ಆಗುತ್ತಿದೆ. ಹಾಗೆಯೇ, ಕಾವೇರಿ ಭಾಗದಲ್ಲಿಯೂ ಕೂಡ ಯಾವ್ಯಾವ ಭಾಗದಲ್ಲಿ ನೀರು ಸೋರಿ ಹೋಗುತ್ತಿದೆಯೋ ಅದನ್ನು ತಡೆದು ಎಷ್ಟು TMC ನೀರು ವ್ಯರ್ಥವಾಗುತ್ತಿತ್ತೋ ಆಷ್ಟು ನೀರನ್ನು ಸಹ ಸದ್ಬಳಕೆ ಮಾಡಿಕೊಳ್ಳಬೇಕೆಂಬುದರ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಜೊತೆಗೆ ನೀರು ಬಳಕೆದಾರರ ಸಂಘಗಳಿಗೆ ಶಕ್ತಿ ಕೊಡುವುದರ ಜೊತೆಗೆ ಅದಕ್ಕೆ ಎಷ್ಟು ಹಣ ಬೇಕಾಗಿದೆಯೋ ಅಷ್ಟು ಹಣವನ್ನು ಕೊಟ್ಟು ನೀರಿನ ನಿರ್ವಹಣೆ ಕೂಡ ಅವರಿಗೇ ಕೊಟ್ಟು ಅಚ್ಚುಕಟ್ಟುದಾರರಿಗೆ ನೀರು ತಲುಪುವಂತೆ ಮಾಡಿ ಅದರಿಂದ ಬರತಕ್ಕಂಥ ತೆರಿಗೆ ಹಣದಲ್ಲಿ ಅವರಿಗೆ ಅರ್ಧ ಮತ್ತು ಸರ್ಕಾರಕ್ಕೆ ಅರ್ಧ ಬರುವಂಥ ದಿಕ್ಕಿನಲ್ಲಿ ಕೂಡ ನಾವು ಯೋಚನೆ ಮಾಡುತ್ತಿದ್ದೇವೆ. ಜೊತೆಗೆ ಬೆಳೆ ಪದ್ಧತಿ ಬಗ್ಗೆ ವರದಿಯಲ್ಲಿ ಕೊಟ್ಟಿದ್ದಾರೆ. ಅಂದರೆ, ಭತ್ತ ಮತ್ತು ಕಬ್ಬನ್ನು ಎಷ್ಟು ಬೆಳೆಯಬೇಕೆಂದು ಹಾಗೂ ಈ ರೀತಿಯ ಅನೇಕ ಸಮಸ್ಯೆಗಳನ್ನು ಅವರು ಹೇಳಿದ್ದಾರೆ. ಆದ್ದರಿಂದ ಬೆಳೆ ಪದ್ಧತಿಯನ್ನು ಜಾಗ್ರತೆ ಮಾಡುವುದಕ್ಕೆ ಏನು

ಮಾಡಬೇಕೆಂಬುದರ ದಿಕ್ಕಿನಲ್ಲಿ ಕೂಡ ಸರ್ಕಾರ ಖಂಡಿತ ಪ್ರಯತ್ನ ಮಾಡುತ್ತದೆ. ಮತ್ತೆ ಹೇಳುವುದೇನೆಂದರೆ, ಈ ಭಾಗಕ್ಕೆ ಅತೀ ಹೆಚ್ಚು ಹಣವನ್ನು ಇಡಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. ಮಾನ್ಯ ವಾಟಾಳ್ ನಾಗರಾಜ್‌ರವರಂಥ ಹಿರಿಯರಿಗೆ ಮತ್ತು ಈ ರೀತಿಯ ಕಳಕಳಿಯಿರುವಂಥ ರಾಜ್ಯದ ಎಲ್ಲಾ ಹೋರಾಟಗಾರರಿಗೆ ಮತ್ತು ನಾಗರಿಕರಿಗೆ ನಾನು ಹೇಳುವುದೇನೆಂದರೆ, ಈ ಸರ್ಕಾರ ಎಲ್ಲರ ಒಳ್ಳೆಯ ಸಲಹೆಗಳನ್ನು ತೆಗೆದುಕೊಂಡು ಈ ಸದನದ ಅಭಿಪ್ರಾಯಕ್ಕೆ ತಕ್ಕಂತೆ ಹಾಗೂ ಸರ್ವಪಕ್ಷಗಳ ಅಭಿಪ್ರಾಯಕ್ಕೆ ತಕ್ಕಂತೆ ಇದರ ಬಗ್ಗೆ ಏನು ಕ್ರೋಡೀಕರಣವಾಗುತ್ತದೆಯೋ ಅದನ್ನು ತೀರ್ಮಾನವೆಂದು ತೆಗೆದುಕೊಳ್ಳುವುದರ ಜೊತೆಗೆ ಕಾವೇರಿ ವಿಷಯದಲ್ಲಿ ಯಾವುದೇ ಕಾರಣಕ್ಕೂ ರಾಜ್ಯ ಸರ್ಕಾರ ಹಿಂದೇಟು ಹಾಕುವುದಿಲ್ಲ, ಈ ಕಾವೇರಿ ವಿಚಾರದಲ್ಲಿ ಸರ್ಕಾರ ಮುಂದೆ ನುಗ್ಗಿ ರೈತರ ಹಿತವನ್ನು ಈ ದಿಕ್ಕಿನಲ್ಲಿ ಕಾಪಾಡುತ್ತೇವೆಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಅವರ ವಾದವನ್ನು ತಳ್ಳಿ ಹಾಕುವುದಿಲ್ಲ. ದಯವಿಟ್ಟು ಈ ಸದನವನ್ನು ಮುಂದೂಡಿ. ಇಲ್ಲವಾದರೆ, ಸದನ ಮೂಲಕ ಕಾವೇರಿ ನೀರಿಗೆ ಸಂಬಂಧಪಟ್ಟಂತೆ ನ್ಯಾಯ ಮಂಡಳಿ ನೀಡಿರತಕ್ಕಂಥ ತೀರ್ಪನ್ನು ಸಾರಾಸಗಟಾಗಿ ತಿರಸ್ಕರಿಸಿದ್ದೇವೆಂದು ತಾವು ಹೇಳಿ. ಅದನ್ನು ಬಿಟ್ಟು ತಾವು ಬೇರೆ ನಡೆಸುವುದಾದರೆ ನಾನು ಈ ಸದನವನ್ನು ಬಹಿಷ್ಕಾರ ಮಾಡುತ್ತೇನೆ. ನಾನು ನಿನ್ನೆ ದಿವಸ ಕೂಡ ಈ ಸದನವನ್ನು ಬಹಿಷ್ಕಾರ ಮಾಡಿದ್ದೇನೆ, ಆದರೂ ಇವತ್ತೂ ಕೂಡ ನನಗೆ ಚಿಂತೆ ಇಲ್ಲ. ನಾನು ಬಹಿಷ್ಕಾರ ಮಾಡಿರುವುದಕ್ಕೆ ಎಷ್ಟರ ಮಟ್ಟಿಗೆ ಬೆಂಬಲ ಸಿಗುತ್ತದೆ ಅಥವಾ ಬಿಡುತ್ತದೆ ಎನ್ನತಕ್ಕಂಥದ್ದು ಬೇರೆ. ನನಗೆ ಸಿಗಲಿ ಅಥವಾ ಬಿಡಲಿ ನನ್ನ ಬಹಿಷ್ಕಾರವನ್ನು ಯಾರೂ ತಡೆಯುವುದಕ್ಕೆ ಆಗುವುದಿಲ್ಲ. ಇವತ್ತು ಇಡೀ ದಿನ ಅಂದರೆ, ಬೆಳಿಗ್ಗೆಯಿಂದ ಸಂಜೆಯವರೆಗೆ ನಾನು ಸಭೆಯನ್ನು ಬಹಿಷ್ಕಾರ ಮಾಡುತ್ತೇನೆ. ಇದರ ಬಗ್ಗೆ ಬೇರೆ ಮಾತಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ: ಇದರ ಬಗ್ಗೆ ತಾವು ಮಾಡುತ್ತಿರುವ ಹೋರಾಟವನ್ನು ನಾನು ನೋಡಿಕೊಂಡು ಬಂದಿದ್ದೇನೆ. ಅದನ್ನು ನಾನು ಮೆಚ್ಚುತ್ತೇನೆ. ಇದು ನನ್ನ ವೈಯಕ್ತಿಕವಾದರೂ ಕೂಡ ಸರ್ಕಾರ ಈ ದಿಕ್ಕಿನಲ್ಲಿ ಕಾಲಿಡುತ್ತದೆ. ಆದರೆ, ನಾನು ತಮ್ಮಲ್ಲಿ ಕೇಳುವುದೇನೆಂದರೆ, ಹಿಂದೆ ನಡೆದಂತಹ

ಸರ್ವಪಕ್ಷದ ಸಭೆಯಲ್ಲಿ ಏನು ತೀರ್ಮಾನ ತೆಗೆದುಕೊಳ್ಳಲಾಗಿದೆಯೋ ಅದನ್ನು ಬಿಟ್ಟು ನಾನು ಹೋಗುವುದಕ್ಕೆ ಆಗುವುದಿಲ್ಲ. ಆ ಸಭೆಯಲ್ಲಿ ತಾವು ಕೂಡ ಇದ್ದೀರಿ. ಮೊದಲು ವರದಿ ಕೊಡಿ ನಾವೆಲ್ಲ ಓದಿಕೊಂಡು ಬರುತ್ತೇವೆ. ಅನಂತರ ಇದರ ಬಗ್ಗೆ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳೋಣವೆಂದು ತಿಳಿಸುತ್ತಾ ಇದರ ಬಗ್ಗೆ ಸರ್ವಪಕ್ಷ ಸಭೆಯಲ್ಲಿ ಏನು ತೀರ್ಮಾನ ತೆಗೆದುಕೊಳ್ಳುತ್ತೇವೆಯೋ ಅದೇ ಅಂತಿಮ. ಸರ್ಕಾರ ಇದರಿಂದ ಯಾವುದೇ ಕಾರಣಕ್ಕೂ ಹಿಂದೆ ಹೋಗುವುದಿಲ್ಲ. ಸನ್ಮಾನ್ಯ ವಾಟಾಳ್ ನಾಗರಾಜ್‌ರವರೇ, ತಾವು ಇದರ ಬಗ್ಗೆ ದಯವಿಟ್ಟು ಅರ್ಥಮಾಡಿಕೊಳ್ಳಿ. ಅವಕಾಶ ಬಂದರೆ ರಾಜೀನಾಮೆ ಕೊಡಬೇಕೆಂಬ ಮಾತನ್ನು ತಾವು ಹೇಳಿದ್ದೀರಿ. ಸರ್ವಪಕ್ಷ ಸಭೆಯಲ್ಲಿ ರಾಜೀನಾಮೆ ಕೊಡತಕ್ಕಂಥ ಪರಿಸ್ಥಿತಿ ಬಂದರೆ ಖಂಡಿತವಾಗಿ ರಾಜೀನಾಮೆ ಕೊಡುತ್ತೇನೆ. ನಾನೇನು ಈ ಕುರ್ಚಿಯಲ್ಲಿ ಅಂಟಿಕೊಂಡಿರಬೇಕೆಂದು ಇಲ್ಲ. ನಾನು ನಿಮ್ಮ ಹಾಗೆ ರೈತರ ವಿಚಾರದೃಷ್ಟಿಯಿಂದ ಹೋರಾಟ ಮಾಡಿಕೊಂಡು ಬಂದಿದ್ದೇನೆ. ಆದ್ದರಿಂದ ನಾನು ತಮಗೆ ಕೈಮುಗಿದು ಕೇಳಿಕೊಳ್ಳುವುದೇನೆಂದರೆ, ನೀವು ಸಭಾತ್ಯಾಗ ಮಾಡಿದರೆ ಸರ್ವ ಪಕ್ಷಗಳ ಸಭೆಗೆ ನೀವು ಎಷ್ಟರಮಟ್ಟಿಗೆ ಬದ್ದರೆಂಬ ಪ್ರಶ್ನೆ ಬರುತ್ತದೆ. ಈ ವಿಚಾರದಲ್ಲಿ ನಾನು ಚಿಕ್ಕವನು ಮತ್ತೆ ನಿಮ್ಮ ಹೋರಾಟದ ಮುಂದೆ ನನ್ನದೇನು ಅಲ್ಲ. ಆದರೂ ಕೂಡ ನಾನು ಹೇಳುವುದೇನೆಂದರೆ, ಸರ್ವಪಕ್ಷಗಳ ತೀರ್ಮಾನಕ್ಕೆ ಸರ್ಕಾರ ಬದ್ದವಲ್ಲ ಎಂದು ಹೇಳಿದಾಗ ಅಂದರೆ, ಅದರ ಬಗ್ಗೆ ತೀರ್ಮಾನವಾಗದಿದ್ದರೆ ಅಥವಾ ನಮ್ಮ ಸರ್ಕಾರ ಒಪ್ಪದಿದ್ದರೆ ನಾನು ಖಂಡಿತ ರಾಜೀನಾಮೆ ಕೊಟ್ಟು ನಿಮ್ಮ ಜೊತೆ ಇರುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ರಾಜೀನಾಮೆ ಕೊಡುವುದಕ್ಕೆ ನಾನೂ ಕೂಡ ಸಿದ್ದನಿದ್ದೇನೆ. ಕಾವೇರಿ ಬಗ್ಗೆ ಅನ್ಯಾಯವಾದರೆ, ನಾನು ಒಂದು ನಿಮಿಷ ಕೂಡ ಇರದೆ ರಾಜೀನಾಮೆ ಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಇವರಿಬ್ಬರಲ್ಲ, ರಾಜೀನಾಮೆ ಕೊಡುವುದಕ್ಕೆ ನಾವೂ ಕೂಡ ಸಿದ್ದರಿದ್ದೇವೆ. ದಯಮಾಡಿ ಇವತ್ತು ಒಂದು ದಿವಸ ತಾವು ಕುಳಿತುಕೊಳ್ಳಿ. ಈ ವಿಷಯ ತೀರ್ಮಾನವಾಗದಿದ್ದರೆ ಮಾನ್ಯ ಸ್ಪೀಕರ್‌ರವರು ರಾಜೀನಾಮೆ ಕೊಡುವುದಿಲ್ಲವೇ? ರಾಜ್ಯಕ್ಕೆ ಒಳ್ಳೆಯದಾಗದಿದ್ದರೆ ಎಲ್ಲರೂ ಸಹ ರಾಜೀನಾಮೆ ಕೊಟ್ಟು ಹೋಗೋಣ.

ಶ್ರೀ ವಾಟಾಳ್ ನಾಗರಾಜ್: ಈಗ ಕಾವೇರಿ ಬಿಟ್ಟು ಬೇರೆ ವಿಷಯದ ಬಗ್ಗೆ ಚರ್ಚೆಯಾದರೆ ಇವತ್ತಿನ ಸಭೆಯಲ್ಲಿ ನಾನು ಭಾಗವಹಿಸುವುದಿಲ್ಲ. ನಾನು ಬಹಿಷ್ಕಾರ ಮಾಡುತ್ತೇನೆ. ದಯವಿಟ್ಟು ಬೇಜಾರು ಮಾಡಿಕೊಳ್ಳಬೇಡಿ. ನಿಮ್ಮ ಬಗ್ಗೆ ನನಗೆ ಬಹಳ ಗೌರವ ಇದೆ. .

ಶ್ರೀ ಕೆ.ಎಸ್.ಈಶ್ವರಪ್ಪ: ತಾವು ಸಭಾತ್ಯಾಗ ಮಾಡಬೇಡಿ. ಸರ್ವಪಕ್ಷಗಳ ಸಭೆಗೆ ನೀರಾವರಿ ತಜ್ಞರು ಮತ್ತು ಹೋರಾಟಗಾರರೆಲ್ಲರೂ ಕೂಡ ಬರುತ್ತಾರೆ. ಅಲ್ಲಿ ಚರ್ಚೆ ಮಾಡಿ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳೋಣ. ಆದ್ದರಿಂದ ಈಗ ಸಭಾತ್ಯಾಗ ಮಾಡಿದರೆ ಇದು ಯಾವ ನ್ಯಾಯ?

ಶ್ರೀ ವಾಟಾಳ್ ನಾಗರಾಜ್: ಬೇರೆ ವಿಷಗಳ ಬಗ್ಗೆ ಚರ್ಚೆ ಮಾಡುವುದಿಲ್ಲವೆಂದು ಹೇಳಿ. ಇಲ್ಲದಿದ್ದರೆ, ಸದನವನ್ನು ಮುಂದಕ್ಕೆ ಹಾಕಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಸಭಾತ್ಯಾಗ ತಾವು ಮಾಡಬೇಡಿ ಎಂದು ನಾವು ಕೇಳುತ್ತಿದ್ದೇವೆ. ಇವತ್ತು ಸಾಯಂಕಾಲದವರೆಗೆ ಇರಿ.

ಶ್ರೀ ಕೆ.ಎಸ್.ಈಶ್ವರಪ್ಪ: ಸರ್ವ ಪಕ್ಷಗಳ ಸಭೆಯನ್ನು ಯಾವಾಗ ಇಟ್ಟುಕೊಳ್ಳಬೇಕೆಂದು ಇವತ್ತು ಸಾಯಂಕಾಲ ನಡೆಯುವ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಆರ್. ಧ್ರುವನಾರಾಯಣ್: ಮಾನ್ಯ ಅಧ್ಯಕ್ಷರೆ, ಮಾತನಾಡುವುದಕ್ಕೆ ನಮಗೂ ಕೂಡ ಅವಕಾಶ ಕೊಡಿ.

ಶ್ರೀ ವಾಟಾಳ್ ನಾಗರಾಜ್: ಇದು ಅನ್ಯಾಯ, ನಾನು ಬಹಿಷ್ಕಾರ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸಭೆಯಿಂದ ಹೊರಗೆ ಹೋದರು)

ಶ್ರೀ ಆರ್. ಧ್ರುವನಾರಾಯಣ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನಿನ್ನೆ ದಿವಸ ಉದಯ ಚಾನಲ್‌ನಲ್ಲಿ ಸಂದರ್ಶನ ನಡೆಸಿದಂಥ ಸಂದರ್ಭದಲ್ಲಿ ಕಾವೇರಿ ತೀರ್ಪಿನಿಂದ ಇಡೀ ರಾಜ್ಯಕ್ಕೆ ಬಹಳ ಅನ್ಯಾಯವಾಗಿದೆ ಎಂಬ ಮಾತನ್ನು ಹೇಳಿದ್ದೀರಿ. ನಿಮ್ಮ ಮಾತನ್ನು ರಾಜ್ಯವ್ಯಾಪ್ತಿ ಈ ಒಂದು ಮಾಧ್ಯಮದ ಮೂಲಕ ಜನ ನೋಡಿದ್ದಾರೆ. ಆದ್ದರಿಂದ, ಈ ಒಂದು ತೀರ್ಪಿನ ವಿರುದ್ಧ ಖಂಡನೀಯ ನಿರ್ಣಯವನ್ನು ಏಕೆ ತೆಗೆದುಕೊಳ್ಳಬಾರದೆಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯಕ್ಕೆ ಇದರಿಂದ ಅನ್ಯಾಯವಾಗಿದೆ ಎಂದು

ಪಕ್ಷತೀತವಾಗಿ ಹೇಳುತ್ತಿರುವಾಗ ಈ ನಿರ್ಣಯ ತೆಗೆದುಕೊಳ್ಳುವುದಕ್ಕೆ ಏನು ತಪ್ಪಾಗುತ್ತದೆ?

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಇಲ್ಲಿ ನಿರ್ಣಯ ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು: ಅದರ ಬಗ್ಗೆ ಈಗಾಗಲೇ ಎಲ್ಲರೂ ಮಾತನಾಡಿದ್ದಾರೆ. ಈಗ ಮುಂದಿನ ವಿಷಯಕ್ಕೆ ಹೋಗೋಣ.

ಶ್ರೀ ಕೆ.ಎಸ್. ಈಶ್ವರಪ್ಪ:ಮಾನ್ಯ ಅಧ್ಯಕ್ಷರೆ, ಇಲ್ಲಿ ನಿರ್ಣಯ ಮಾಡುವುದಾದರೆ ಸರ್ವಪಕ್ಷಗಳ ಸಭೆಯನ್ನು ಏಕೆ ಕರೆಯಬೇಕಾಗಿತ್ತು? ತಾವೆಲ್ಲರೂ ಹಿರಿಯರಿದ್ದೀರಿ , ಅದ್ದರಿಂದ ತಾವು ಏನು ಅಭಿಪ್ರಾಯವನ್ನು ಕೊಡುತ್ತಿರೋ ಅದನ್ನು ಒಪ್ಪಿಕೊಳ್ಳುವುದಕ್ಕೆ ನಾನು ತಯಾರಿದ್ದೇನೆ.

ಶ್ರೀ ಆರ್. ಧ್ರುವನಾರಾಯಣ್: ಸರ್ವಪಕ್ಷಗಳ ಸಭೆ ಕರೆಯುವುದಕ್ಕಿಂತ ಮೊದಲು ತಾವು ಮಾಧ್ಯಮದಲ್ಲಿ ನಿನ್ನೆ ದಿವಸ ಹೇಳಿದ್ದೀರಿ. ಅನ್ಯಾಯವಾಗಿದೆ ಎಂದು ತಾವು ನೀರಾವರಿ ಮಂತ್ರಿಗಳಾಗಿ ಒಪ್ಪಿಕೊಂಡಿದ್ದೀರಿ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ನಾವೆಲ್ಲರೂ ಸರ್ವಪಕ್ಷಗಳ ಸಭೆಯಲ್ಲಿದ್ದಂಥ ಸಂದರ್ಭದಲ್ಲಿ ಒಂದು ತೀರ್ಮಾನವಾಗಿದೆ. ಅದೇನೆಂದರೆ, ಟ್ರಿಬ್ಯುನಲ್‌ನ ಜಡ್ಜಮೆಂಟ್‌ನ ಕಾಪಿಯನ್ನು ಎಲ್ಲರೂ ತೆಗೆದುಕೊಂಡು ಅದನ್ನು ಸಂಪೂರ್ಣವಾಗಿ ಓದಿ ಆನಂತರ ಅದರ ಬಗ್ಗೆ ಚರ್ಚೆಮಾಡಿ ಅಂತಿಮವಾದ ತೀರ್ಮಾನವನ್ನು ತೆಗೆದುಕೊಳ್ಳುವವರೆಗೂ ಯಾರು ಏನು ಮಾಡಬಾರದೆಂಬ ಅಭಿಪ್ರಾಯಕ್ಕೆ ಬಂದಿದ್ದೇವೆ. ಏಕೆಂದರೆ, ಆ ಸಭೆಯಲ್ಲಿ ಎಲ್ಲಾ ಪಕ್ಷದವರೂ ಸಹ ಇದ್ದರು. ಮಾನ್ಯ ವಾಟಾಳ್ ನಾಗರಾಜ್‌ರವರೂ ಕೂಡ ಆ ಸಭೆಯಲ್ಲಿದ್ದರು. ಆದ್ದರಿಂದ ಸರ್ವಪಕ್ಷಗಳ ತೀರ್ಮಾನ ವಿರುದ್ಧವಾಗಿ ಇನ್ನೊಂದು ಹೇಳಿಕೆ ಮತ್ತು ತೀರ್ಮಾನವನ್ನು ಇಲ್ಲಿ ಮಾಡುವುದಕ್ಕೆ ಸದ್ಯಕ್ಕೆ ಬರುವುದಿಲ್ಲ. ಆದರೆ, ಅದು ಆದಮೇಲೆ ಏನು ಮಾಡಬೇಕೆಂಬುದರ ಬಗ್ಗೆ ತೀರ್ಮಾನ ಮಾಡಬಹುದು.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಕ್ಷಗಳ ವ್ಯವಸ್ಥೆಯನ್ನು ನಾವು ಒಪ್ಪಿಕೊಂಡು ಆಗಿದೆ. ಧ್ರುವನಾರಾಯಣ್‌ರವರ ಪಕ್ಷದವರು ಕೂಡ ಭಾಗವಹಿಸಿದ್ದಾರೆ, ನಾವು ಭಾಗವಹಿಸಿದ್ದೇವೆ. ಎಲ್ಲಾ ಪಕ್ಷದವರು ಭಾಗವಹಿಸಿ ನಾವೇ ಸರ್ಕಾರವನ್ನು ಕೇಳಿಕೊಂಡು ಪೂರ್ಣ text ತರಿಸಿಕೊಡಿ, ಅದನ್ನು ಓದುವವರೆಗೆ ಅದರಲ್ಲಿರುವ ಎಲ್ಲಾ ಸಮಗ್ರವಾದ ವ್ಯಾಖ್ಯಾನವಾಗುವವರೆಗೆ ಈ ಸಭೆಯನ್ನು ಮುಂದಕ್ಕೆ ಹಾಕಿ

ಎಂದು ನಾವೇ ಕೇಳಿಕೊಂಡು ಈಗ ಯಾರನ್ನೂ ಜವಾಬ್ದಾರಿಯನ್ನಾಗಿ ಮಾಡುವುದಕ್ಕೆ ಈ ಶಾಸನಭೆಯಲ್ಲಿ ಆಗುವುದಿಲ್ಲ. ಇದರಲ್ಲಿ ಯಾರಿಗೂ ಕಾವೇರಿ ನೀರಿನ ಕಡಿಮೆ ಕಾಳಜಿ ಬಗ್ಗೆ ಇಲ್ಲ. ಯಾರನ್ನು ಯಾರೂ ಅನುಮಾನ ಪಡುವಂತಿಲ್ಲ, ಎಲ್ಲರೂ ರಾಜ್ಯದ ಹಿತಾಸಕ್ತಿಯನ್ನು ರಕ್ಷಣೆ ಮಾಡಿ ನೆಲ ಜಲ ಉಳಿಸಿಕೊಳ್ಳುವುದಕ್ಕೆ ಇಲ್ಲಿ ಬಂದಿರುವುದು. ಆವೇಶಗಳಿಗಿಂತ ಏನಾದರೂ ವೈಜ್ಞಾನಿಕವಾಗಿ ನಾವು ಸ್ವಲ್ಪ ತರ್ಕಬದ್ಧವಾಗಿ ಒಪ್ಪಿಸಬೇಕಾಗಿರುವುದು ಸರಿ ಎನಿಸುತ್ತದೆ. ಈ ಹಂತದಲ್ಲಿ ಇಂತಹ ನಿರ್ಣಯಗಳು ಬೇಡವೆಂದು ನಾನು ಮಾನ್ಯ ಧ್ರುವನಾರಾಯಣರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಎಲ್ಲರೂ ಕಮಿಟ್ ಆಗಿದ್ದಾರೆ, ಏಕೆಂದರೆ ನಿಮ್ಮ ಪಾರ್ಟಿಯವರು ಕಮಿಟ್ ಆಗಿದ್ದಾರೆ, ನಾವು ಕಮಿಟ್ ಆಗಿದ್ದೇವೆ, ಸರ್ಕಾರ ಈ ವ್ಯವಹಾರದಲ್ಲಿ ರಾಜಕಾರಣ ಮಾಡಿದೆ ಎಂದು ನಮಗೆ ಅನಿಸುವುದಿಲ್ಲ. ಹಾಗಾಗಿ ನಾವು ರಾಜಕಾರಣ ಮಾಡುವುದು ಸರಿ ಎಂದು ಅನಿಸುವುದಿಲ್ಲ. ದಯಮಾಡಿ ಅದನ್ನು ಈ ಹಂತಕ್ಕೆ ಬಿಟ್ಟು ತಾವು ರೆಗ್ಯೂಲರ್ ಆಗಿ ನಿಯಮದ ಪ್ರಕಾರ ಸಭೆಗೆ ಹೋಗಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಈಗ ಪ್ರಶ್ನೋತ್ತರ ವೇಳೆ.

2. ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮೂಲಕ ನೀಡಲಾದ ಉತ್ತರಗಳು.

ಸಕ್ಕರೆ ಸೆಸ್ ವತಿಯಿಂದ ರಸ್ತೆಗಳ ಅಭಿವೃದ್ಧಿ

121 (1141) – ಶ್ರೀ ಬಾಲರಾಜ್ ಎಸ್. (ಕೊಳ್ಳೇಗಾಲ) – ಮಾನ್ಯ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲ ಕ್ಷೇತ್ರಕ್ಕೆ ಸಕ್ಕರೆ ಸೆಸ್‌ನಿಂದ ರಸ್ತೆಗಳ ಅಭಿವೃದ್ಧಿಗೆ ಹಣ ಬಿಡುಗಡೆಗೊಳಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಂದಿದ್ದಲ್ಲಿ, ತೆಗೆದುಕೊಂಡ ಕ್ರಮಗಳೇನು; (ವಿವರ ನೀಡುವುದು);

ಇ) ಕಳೆದ 3 ವರ್ಷಗಳಿಂದ ಶೇಕಡವಾರು ಹಣವನ್ನು ಬಿಡುಗಡೆ ಮಾಡದಿರಲು ಕಾರಣಗಳೇನು; (ವಿವರ ನೀಡುವುದು);

ಈ) ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?